ಪ್ಯಾಂಟ್–ಶರ್ಟ್ ತನಗೊಂದು ಜೊತೆ ಬಟ್ಟೆ ಜೊತೆಗೆ ಒಂದು ಕೇಜಿ ಕೇಸರಿ ಹಲ್ವಾ, ಸೇಬು–ದ್ರಾಕ್ಷಿ ಕೊಂಡು ಮನೆಯತ್ತ ಪಾದ ಬೆಳೆಸಿದ. ದಾರಿಯಲ್ಲಿ ಸಿಕ್ಕ ಊರಿನವರು, ಪರಿಚಿತರೆಲ್ಲ ಒಂದು ತೆರನಾದ ಗೌರವ ಮಿಶ್ರಿತ ಭಾವದಿಂದ ತನ್ನನ್ನು ನೋಡುತ್ತಿರುವುದಾಗಿ ಭಾವಿಸಿದ. ಮನಸ್ಸಿನಲ್ಲಿ ಇಂದಿಗೆ ತಾನೂ ಒಬ್ಬ 'ಜನ' ಆದೆ ಅಂತಂದುಕೊಡು ಹೆಮ್ಮೆಯಿಂದ ಹೆಜ್ಜೆ ಹಾಕಿದ. ಬರೋ ಹಣದಲ್ಲಿ 60–70 ಲಕ್ಷ ವೆಚ್ಚಮಾಡಿ ಒಂದು ಲಕ್ಷಣವಾದ ಆರ್.ಸಿ.ಸಿ. ಗ್ರೈನೈಟ್ ಮನೆ, ಮಗನಿಗೊಂದು ಬೈಕು, ತನಗೊಂದು ಕಾರು, ಹೆಂಡತಿಗಿಷ್ಟು ಬಂಗಾರ– ಹೀಗೇ ನಡೆದಿತ್ತು ಹಿರಿಯಣ್ಣನ ಲೆಕ್ಕಾಚಾರ.

★★★

ರಸ್ತೆ ಪ್ರಾಧಿಕಾರದ ಕಚೇರಿಯವರು ಕೇಳಿದ ದಾಖಲೆ ಪತ್ರಗಳನ್ನು ಸಂಗ್ರಹಿಸಲು ಹಿರಿಯಣ್ಣನ ಚಪ್ಪಲಿ ಅರ್ಧ ಸವೆದುಹೋಯಿತು. ರೆಕಾರ್ಡ್ ಆಫ್ ರೈಟ್, ಮ್ಯುಟೇಶನ್ ಎಂಟ್ರಿ ಸರ್ಟಿಫಿಕೇಟ್, ಇಲ್ಲಿಯವರೆಗಿನ ಆಸ್ತಿ ತೆರಿಗೆ ರಶೀದಿಗಳು, ಆಸ್ತಿಯ ಮೇಲೆ ಬೇರೆಯವರ ಹಕ್ಕುಪತ್ರ(ಎನ್‌ಕಂಬರನ್ಸ್), ಒರಿಜಿನಲ್ ಸೇಲ್ ಡೀಡ್, ಮನೆಕಟ್ಟಿದ ಬಗ್ಗೆ ಪರವಾನಗಿ ಪತ್ರ ಮಂತಾದವುಗಳ ಯಾದಿಗಳ ಸಂಖ್ಯೆ ಹದಿನಾರಕ್ಕೇರಿತ್ತು. ಪಂಚಾಯತಿ ಆಫೀಸಿನಿಂದ ತಹಸೀಲ್ದಾರ್ ಕಚೇರಿಯವರೆಗೆ ಪದೇ ಪದೇ ಓಡಾಡಿ ಹಿರಿಯಣ್ಣ ಬಸವಳಿದು ಹೋದ. ಎಲ್ಲಿಗೆ ಎಡತಾಕಿದರೂ 'ನಾಳೆ ಬಾ' ಎನ್ನುವದು ಸರ್ವೇಸಾಮಾನ್ಯವಾಗಿತ್ತು. ಕೈ ಬಿಸಿ ಮಾಡದ ಹೊರತು ಏನೂ ದಕ್ಕುವದಿಲ್ಲವೆಂಬ ಕಟು ಸತ್ಯದಿಂದಾಗಿ ಸಾವಿರಾರು ರೂಪಾಯಿ ಕೈ ಬಿಟ್ಟಿತು. ಇವೆಲ್ಲವುಗಳ ಜೊತೆಗೆ ಆಸ್ತಿ – ಮನೆಗೆ ಬಾಧ್ಯಸ್ಥರಾಗಿದ್ದ ಹಿರಿಯಣ್ಣನ ಇಬ್ಬರು ಹೆಣ್ಣುಮಕ್ಕಳು, ಮನೆಯಲ್ಲಿಯೇ ಇದ್ದ ಮಗ ಶ್ರೀಕಂಠ ಇವರೆಲ್ಲರ ಒಪ್ಪಿಗೆ ಹಾಗೂ ಸಹಿ ಬೇಕಿತ್ತು. ಅದೇನೂ ದೊಡ್ಡ ವಿಷಯವಲ್ಲ ಎಂದು ಭಾವಿಸಿಕೊಂಡ ಹಿರಿಯಣ್ಣ ಬಾಕಿ ಉಳಿದ ಕಾಗದ ಪತ್ರಗಳನ್ನು ತರಲು ಓಡಾಡಲಾರಂಭಿಸಿದ.

ಹಿರಿಯಣ್ಣನಿಗೆ ಇಬ್ಬರು ಹೆಣ್ಣುಮಕ್ಕಳು– ಶ್ರೀಲಕ್ಷ್ಮಿ ಹಾಗೂ ಶ್ರೀ ಕುಮಾರಿ. ಕಿರಿಯವನೇ ಮಗ ಶ್ರೀಕಂಠ. ಶ್ರೀಲಕ್ಷ್ಮಿಯ ಗಂಡ ಜನಾರ್ದನ ಸಾಗರದ ಕಾಲೇಜೊಂದರಲ್ಲಿ ಲೆಕ್ಚರರ್, ಎರಡನೇಯವಳಾದ ಶ್ರೀ ಕುಮಾರಿಯ ಪತಿ ಪುರುಷೋತ್ತಮ ಹುಬ್ಬಳ್ಳಿಯಲ್ಲಿದ್ದ ಆರ್.ಎಸ್. ಶೆಟ್ಟಿ ಕಂಪೆನಿಯಲ್ಲಿ ಸೇಲ್ಸ್ ಮ್ಯಾನೇಜರ್. ಇಬ್ಬರದ್ದೂ ಅನುಕೂಲಸ್ಥ ಕುಟುಂಬ, ಹಿರಿಯವಳಿಗೆ ಒಬ್ಬಳೇ ಮಗಳು, ಕಿರಿಯವಳಿಗೆ ಎರಡೂ ಗಂಡು. ವಿಶೇಷವಾಗಿ ಏನೂ ಕೆಲಸ–ಕಾರ್ಯವಿಲ್ಲದ ಶ್ರೀಕಂಠ ಮೇಲಿಂದ ಮೇಲೆ ಏನಾರೂ ಪಿಳ್ಳೆನೆವ ತೆಗೆದು ಅಕ್ಕಂದಿರ ಮನೆಗೆ ಎಡತಾಕುವದೂ, ಅಲ್ಲಿ ನಾಲ್ಕಾರು ದಿನಗಳ ಕಾಲ ಗಪ್ಪ ಹೊಡೆಯುತ್ತ, ಪೇಟೆ ಸುತ್ತಾಡಿ ಸಿನಿಮಾ ನೋಡುವದೂ, ಅಲ್ಲದೆ ಭಾವಂದಿರ ಮನೆಯಲ್ಲಿ ಯೂ ಟ್ಯೂಬಿನಲ್ಲಿರೋ ಸಿನಿಮಾಗಳನ್ನು ಡೌನ್‌ಲೋಡ್ ಮಾಡಿಕೊಂಡು ಅವನ್ನು ಟೀವಿಯಲ್ಲಿ ವೀಕ್ಷಿಸುತ್ತ ಮೆತ್ತನೆಯ ಸೋಫಾ ಮೇಲೆ ಆಸೀನನಾಗಿ ಅಕ್ಕಂದಿರು ನೀಡುವ ಕುರುಕಲು ತಿಂಡಿಯನ್ನು ಮೆಲ್ಲುತ್ತ ಮಜಾ ಉಡಾಯಿಸುವದನ್ನು ಅಭ್ಯಾಸ ಮಾಡಿಕೊಂಡಿದ್ದ. ಭಾವಂದಿರಿಗೆ ಪ್ರಾಯಕ್ಕೆ ಬಂದ ಶ್ರೀಕಂಠ ಹೀಗೆ ನಿರುದ್ಯೋಗಿಯಾಗಿ, ಅಪಾಪೋಲಿಯಾಗಿ ಕಾಲಹರಣ ಮಾಡುವದಕ್ಕೆ ಅಸಮಾಧಾನವಿದ್ದರೂ ಹೆಂಡಂದಿರ ಒತ್ತಾಸೆಯಿಂದಾಗಿ ಇವ ಬಂದಾಗಲೆಲ್ಲ 'ಜೈ ಜೈ' ಅನ್ನುವದನ್ನು ಅನಿವಾರ್ಯವಾಗಿ



